# ಗಾಯತ್ರೀ - ವೇದಮಧು ಎನ್ನುತ್ತಾನೆ ಭಗವಾನ್ ಶ್ರೀಕೃಷ್ಣ

ಶ್ರೀಯುತರು ಮೂಲತಃ ಧಾರವಾಡ ಜಿಲ್ಲೆಯವರು. ವಿಜ್ಞಾನ ಹಾಗೂ ಇಂಜಿನಿಯರಿಂಗ್ ವಿಭಾಗಗಳೆರಡರಲ್ಲೂ ಪದವೀಧರರಾದ ಅವರು ಕೇಂದ್ರ ಸರ್ಕಾರದ ರಕ್ಷಣಾ ಸಚಿವ ಖಾತೆಯ ಕ್ವಾಲಿಟಿ ಅಷ್ಯೂರನ್ಸ್ ಆರ್ಗನೈಸೇಷನ್ನಿನಲ್ಲಿ ಸೇವೆ ಸಲ್ಲಿಸಿ ಬೆಂಗಳೂರಿನ ಸಿಕ್ಯೂಏ ರಡಾರ್‌ನ ನಿರ್ದೇಶಕ ಸ್ಥಾನಕ್ಕೆ ಏರಿ ನಂತರ ನಿವೃತ್ತರಾದರು. ಶ್ರೀ ಸತ್ಯಪರಾಕ್ರಮ ತೀರ್ಥ ಸ್ವಾಮೀಜಿಯವರ ವಂಶಸ್ಥರು. ಇಂತಹ ಸನಾತನ ಧರ್ಮ ಮತ್ತು ಪ್ರಖ್ಯಾತ ಪಂಡಿತೋತ್ತಮರ ವಂಶಗಳಿಗೆ ಸೇರಿದ ಶ್ರೀ ವಾಯಿಕರ್ ಅವರು ಶ್ರೀಸತ್ಯಧ್ಯಾನತೀರ್ಥರ ಅಚ್ಚು ಮೆಚ್ಚಿನ ಶಿಷ್ಯರೂ, ಪ್ರಖ್ಯಾತ ವಿದ್ವಾಂಸರೂ ಆದ ಶ್ರೀ ವಾಸುದೇವಾಚಾರ್ಯ ಯಲಮೇಲಿ ಅವರಲ್ಲಿ ಪ್ರಾಚೀನ ಗುರುಕುಲ ಮಾದರಿಯಲ್ಲಿ ಶಿಷ್ಯವೃತ್ತಿ ಕೈಗೊಂಡು, ನ್ಯಾಯ ಹಾಗೂ ವೇದಾಂತ ಶಾಸ್ತ್ರಗಳಲ್ಲಿ ಸಾಕಷ್ಟು ದೀರ್ಘಕಾಲದ ತರಬೇತಿ ಪಡೆದು ಅದರಲ್ಲಿ ಪಾರಂಗತರಾದರು. ಶ್ರೀಯುತರಿಂದ 'ಗಾಯತ್ರೀ ವೈಭವ', 'ಶಾಸ್ತ್ರ ಸರಣಿ-ದಾಸವಾಣಿ', 'ಶ್ರೀಮತ್ಸತ್ಯಪರಾಕ್ರಮತೀರ್ಥ ವೈಭವ', 'ದ ಗ್ಲೋರೀಸ್ ಆಫ್ ಗಾಯತ್ರೀ', ಹಾಗೂ 'ಧರ್ಮೋರಕ್ಷತಿ ರಕ್ಷಿತಃ' ಎಂಬ ಅಮೂಲ್ಯ ಕೃತಿಗಳನ್ನು ಸಮಾಜಕ್ಕೆ ನೀಡಿದ್ದಾರೆ.

ಗಾಯತ್ರಿಯ ಮಹತ್ವವನ್ನು ಶ್ರೀಕೃಷ್ಣನು ಕೇವಲ ಕೆಲವೇ ಮಾತುಗಳಲ್ಲಿ ವರ್ಣಿಸಿದ್ದಾನೆ. ಇಂಥ ಸುವಾಕ್ಯಗಳನ್ನು ನಾವು ಬೇರೆಕಡೆಗೆ ಕಾಣಲಾರೆವು. ಆ ಭಗವಂತನ ಮುಖದಿಂದ ನಿಸ್ಸೃತವಾದ ಕೆಲವು ವಾಕ್ಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಗಾಯತ್ರೀ ಮಂತ್ರವು ದ್ವಿಜಸಮಾಜಕ್ಕೆ ವೇದಮಾತೆ ಕೊಟ್ಟ ಒಂದು ಅಮೂಲ್ಯ ವರ. ದ್ವಿಜದಂಪತಿಗಳಿಗೆ ತಮ್ಮ ಮಕ್ಕಳು ಸನ್ಮಾರ್ಗದಲ್ಲಿರಬೇಕೆಂಬ ಒಂದು ಹೆಬ್ಬಯಕೆ ಇಲ್ಲದೇ ಇಲ್ಲ. ಅದಕ್ಕಾಗಿ ಸಕಾಲದಲ್ಲಿ ಅಥವಾ ಕೆಲವು ಸಂದರ್ಭಗಳಲ್ಲಿ ಸ್ವಲ್ಪ ತಡವಾಗಿ ಆದರೂ ಉಪನಯನ ಸಂಸ್ಕಾರವನ್ನು ನೆರೆವೇರಿಸುತ್ತಾರೆ. ಅನಂತರದಲ್ಲಿ ಸಂಧ್ಯೋಪಾಸನೆಯನ್ನು ಮಕ್ಕಳ ಅನುಷ್ಠಾನಕ್ಕೆ ತರುವಸಾಹಸ ಹಿರಿಯರಿಗೆ ಬಹಳ

ಕಷ್ಟ. ಕೆಲವು ವಟುಗಳು ಮಾಡುತ್ತಾರೆ. ಇನ್ನುಕೆಲವರು ಸಂಧ್ಯೋಪಾಸನೆಯ ವಿಷಯದಲ್ಲಿ ಉದಾಸೀನರಾಗಿಯೇ ಇರುತ್ತಾರೆ. ಉದಾಸೀನತೆ ಸರಿಯಲ್ಲ. ಯಾಕೆಂದರೆ, ಈ ಸಂಧ್ಯೋಪಾಸನೆಯಿಂದ ಅಥವಾ ಗಾಯತ್ರೀ ಉಪಾಸನೆಯಿಂದ ಮಾನವನು ಅಭ್ಯುದಯವನ್ನು ಹೊಂದುತ್ತಾನೆ. ಪ್ರಾಚೀನಕಾಲದಿಂದಲೂ ನಮ್ಮ ಹಿರಿಯರು ಈ ಅನುಷ್ಠಾನದಲ್ಲಿ ಅಪಾರ ಶ್ರದ್ಧೆ ಮತ್ತು ನಂಬಿಕೆಯುಳ್ಳವರಾಗಿದ್ದರು. ಸತತ ಅನುಷ್ಠಾನದಿಂದ ಅನುಭವಿಗಳಾಗಿದ್ದರು. ನಮಗೂ ನಂಬಿಕೆ ಇದೆ, ಆದರೆ ಅನುಷ್ಠಾನದಕಡೆಗೆ ಲಕ್ಷ್ಯ ಕಡಿಮೆ.

ಮಹಾಭಾರತದಲ್ಲಿ, ಭೀಷ್ಮ ಪರ್ವದಲ್ಲಿ ಅರ್ಜುನನಿಗೆ ಗೀತೋಪದೇಶದ ನಂತರ ಮುಂದಿನ ಅಧ್ಯಾಯದಲ್ಲಿ ವೈಶಂಪಾಯನರು ಗೀತಾ, ಗಾಯತ್ರೀ, ಗಂಗಾ, ಗೋವಿಂದ ಈ ವಿಷಯವಾಗಿ ಒಂದು ಉತ್ತಮ ವಿಚಾರವನ್ನು ಈ ಕೆಳಗಿನ ಶ್ಲೋಕದ ಮೂಲಕ ವ್ಯಕ್ತಪಡಿಸುತ್ತಾರೆ.

’ಗೀತಾ ಗಂಗಾಚ ಗಾಯತ್ರೀ ಗೋವಿಂದೇತಿ ಹೃದಿ ಸ್ಥಿತೇ |

ಚತುರ್ಗಕಾರಸಂಯುಕ್ತೇ ಪುನರ್ಜನ್ಮ ನ ವಿದ್ಯತೇ’ ||

ಗೀತಾಪಾರಾಯಣ, ಗಂಗಾಸ್ನಾನ, ಗಾಯತ್ರೀ ಜಪ ಮತ್ತು ಗೋವಿಂದ ಧ್ಯಾನ ಅಥವಾ ವಿಷ್ಣುಸಹಸ್ರನಾಮ ಪಠಣಗಳಲ್ಲಿ ನಿರತನಾದವನಿಗೆ ಪುನರ್ಜನ್ಮವಿಲ್ಲವೆಂದು ಈ ಶ್ಲೋಕದ ಸಾರಾಂಶ. ಗೀತೆಯಂತೂ ಶ್ರೀಕೃಷ್ಣನ ಉಪದೇಶ. ಗಂಗಾ ಅವನ ಪಾದೋದ್ಭವ. ವಿಷ್ಣುಸಹಸ್ರನಾಮವನ್ನು ಭೀಷ್ಮರಿಂದ ಸ್ವಾಮಿ ಹೇಳಿಸಿದ್ದು. ಗಾಯತ್ರೀ ವಿಚಾರವಾಗಿ ಶ್ರೀಕೃಷ್ಣ ಪರಮಾತ್ಮನು ಏನಾದರೂ ಹೇಳಿರುವನೇ? ಇಂಥ ಮಹತ್ವದ ವಿಷಯದಲ್ಲಿ ಏನೂ ಹೇಳದೇ ಇರುವನೇ? ಅವಶ್ಯ ಹೇಳಿಯೇ ಹೇಳಿದ್ದಾನೆ.

ಮಹಾಭಾರತದ ಅಶ್ವಮೇಧಪರ್ವದ ಕೊನೆಯ ಭಾಗದಲ್ಲಿ ಈ ವಿಷಯದ ಉಲ್ಲೇಖವನ್ನು ಕಾಣಬಹುದು. ಪಾಂಡವರು ಮತ್ತು ಶ್ರೀಕೃಷ್ಣ ಸಭೆಯಲ್ಲಿ ಉಪಸ್ಥಿತರಿದ್ದಾರೆ. ಶ್ರೀಕೃಷ್ಣನು ದ್ವಾರಕೆಗೆ ಹೋಗುವ ಸಿದ್ಧತೆಯಲ್ಲಿದ್ದಾನೆ. ಪ್ರಾಸಂಗಿಕವಾಗಿ ಯುಧಿಷ್ಠಿರನು ಇನ್ನೊಮ್ಮೆ ವೈಷ್ಣವ ಧರ್ಮಗಳನ್ನುಪದೇಶಿಸಬೇಕೆಂದು ಸ್ವಾಮಿಯನ್ನು ಪ್ರಾರ್ಥಿಸುತ್ತಾನೆ. ಆಗ

ಶ್ರೀಕೃಷ್ಣನು ಅನೇಕ ವಿಚಾರಗಳನ್ನು ಯುಧಿಷ್ಠಿರನಿಗೆ ಉಪದೇಶಿಸುತ್ತಾನೆ. ಅವುಗಳಲ್ಲಿ ಗಾಯತ್ರಿಯೂ ಒಂದು ವಿಚಾರಧಾರೆಯಾಗಿ ಪ್ರವಹಿಸಿತು.

ಗಾಯತ್ರಿಯ ಮಹತ್ವವನ್ನು ಶ್ರೀಕೃಷ್ಣನು ಕೇವಲ ಕೆಲವೇ ಮಾತುಗಳಲ್ಲಿ ವರ್ಣಿಸಿದ್ದಾನೆ. ಇಂಥ ಸುವಾಕ್ಯಗಳನ್ನು ನಾವು ಬೇರೆಕಡೆಗೆ ಕಾಣಲಾರೆವು. ಆ ಭಗವಂತನ ಮುಖದಿಂದ ನಿಸ್ರೃತವಾದ ಕೆಲವು ವಾಕ್ಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

’ಸಾಯಂಪ್ರಾತಸ್ತು ಯೋ ಸಂಧ್ಯಾಂ ಸಮ್ಯಜ್ಞತ್ಯಮುಪಾಸತೇ |

ಅಸ್ಮಾನ ನಾವಂ ವೇದಮಯೀಂ ಕೃತ್ವಾ ತರಂತಿ ತಾರಯಂತಿ ಚ ’ ||

ಯಾವ ಉಪಾಸಕನು ತ್ರಿಕಾಲ ಸಂಧ್ಯಾವಂದನೆಯನ್ನು ಶ್ರದ್ಧೆಯಿಂದ ಸಮರ್ಪಕವಾಗಿ ಉಪಾಸನೆ ಮಾಡುತ್ತಾನೋ ಅವನು ಈ ವೇದಮಯವಾದ ಗಾಯತ್ರಿಯನ್ನು ನಾವೆಯನ್ನಾಗಿ ಮಾಡಿಕೊಂಡು ಈ ಸಂಸಾರಸಾಗರದಿಂದ ತಾನೂ ದಾಟುತ್ತಾನೆ ಮತ್ತು ಪರರನ್ನೂ ದಾಟಿಸುತ್ತಾನೆ.

’ಯೋ ಜಪೇತ್ ಪಾವನೀಂ ದೇವೀಂ ಗಾಯತ್ರೀಂ ವೇದಮಾತರಂ |

ನ ಸೀದೇತ್ ಪರಿಗೃಹ್ಣಾನಃ ಪೃಧಿವೀಂ ಚ ಸ ಸಾಗರಮ್’ ||

ವಿಪುಲವಾದ ದ್ರವ್ಯಾದಿಗಳನ್ನು ದಾನರೂಪವಾಗಿ ಸ್ವೀಕರಿಸುವುದು (ಯೋಗ್ಯತೆಮೀರಿದರೆ) ಪಾಪಹೇತುವಾಗಬಹುದು. ಪ್ರಾಯಶಃ ಆ ಕಾರಣದಿಂದಲೇ ಬುಡಿಲಋಷಿಗಳಿಗೆ ಜನಕರಾಜನು ಸಾವಿರಾರು ಹಸುಗಳನ್ನೂ ಹೇರಳ ದ್ರವ್ಯವನ್ನೂ ದಾನಮಾಡಲು ಉದ್ಯೋಕ್ತನಾದಾಗ ಬುಡಿಲರು ಅಷ್ಟು ದೊಡ್ಡ ದಾನವನ್ನು ಸ್ವೀಕರಿಸಲು ಹಿಂಜರಿದರು. ಅವರಿಗೆ ಗಾಯತ್ರೀಮಂತ್ರದ ಪ್ರಥಮಾಕ್ಷರದ ಪ್ರತಿಪಾದ್ಯ ದೇವತೆಯನ್ನು ಪರಿಚಯಿಸಿದ ಮೇಲೆ ದಾನ ಸ್ವೀಕರಿಸಿದರು. ಈ ಶ್ಲೋಕದ ಭಾವವೂ ಇದನ್ನೇ ಹೇಳುತ್ತದೆ. ಯಾವ ಅಧಿಕಾರಿಯು ಗಾಯತ್ರೀ ಮಂತ್ರ ಜಪಾನುಷ್ಠಾನದಲ್ಲಿ ನಿಷ್ಠೆಯಿಂದ ನಿತ್ಯದಲ್ಲಿಯೂ ನಿರತನಾಗಿದ್ದಾನೆಯೋ ಅವನು ಎಷ್ಟು ದ್ರವ್ಯವನ್ನು ದಾನಧರ್ಮರೀತ್ಯಾ

ಎಷ್ಟು ಸ್ವೀಕಾರಮಾಡಿದರೂ, ಅಥವಾ ಸಮಗ್ರ ಪೃಥಿವೀ ಸಮುದ್ರಾದಿಗಳನ್ನು ಸಹ ಸ್ವೀಕರಿಸಿದರೂ ಪರಿಗ್ರಹ ದೋಷಕ್ಕೆ ಪಾತ್ರನಾಗುವುದಿಲ್ಲ.

'ಯೇ ಚಾಸ್ಯ ದುಸ್ಥಿತಾಕೇಚಿತ್ ಗ್ರಹಾಃ ಸೂರ್ಯಾದಯೋದಿವಿ |

ತೇ ಚಾಸ್ಯ ಸೌಮ್ಯಾಜಾಯಂತೇ ಶಿವಾಃ ಶುಭಕರಾಸ್ತಥಾ' ||

ಆಕಾಶದಲ್ಲಿ ಗ್ರಹಗಳ ಸಂಚಾರದಿಂದ (ಗ್ರಹಗಳು ನೀಚಸ್ಥಾನ ಶತ್ರು ಸ್ಥಾನಗಳಲ್ಲಿ ಸಂಚರಿಸುವುದರಿಂದ) ಮನುಷ್ಯನು ದುಸ್ಥಿತಿಗಳನ್ನು ಅನುಭವಿಸತಕ್ಕ ಸಂದರ್ಭಗಳುಂಟು. ಆದರೆ ಗಾಯತ್ರೀ ಮಂತ್ರ ಜಪೋಪಾಸಕನಿಗೆ ಗ್ರಹಗಳು ಸೌಮ್ಯವಾಗಿಯೂ ಶುಭಕರವಾಗಿಯೂ ಪರಿಣಮಿಸಿ ಶುಭಫಲಗಳನ್ನು ಪ್ರಧಾನಮಾಡುತ್ತಾರೆ.

ಕೆಲವು ಸಂದರ್ಭಗಳಲ್ಲಿ ನಾವು ವಾಸಿಸತಕ್ಕ ಸ್ಥಳಗಳಲ್ಲಿ ದುರ್ದೈವ ವಶಾತ್ ಭೂತ ಪ್ರೇತ ಪಿಶಾಚಾದಿಗಳು ಅಲ್ಲಿ ಇರುತ್ತಿದ್ದರೂ, ಗಾಯತ್ರೀ ಉಪಾಸಕನನ್ನು ಅವುಗಳು ಬಾದಿಸಲಾರವು. ಅದು ಗಾಯತ್ರೀ ಮಂತ್ರದಲ್ಲಿರುವ ರಕ್ಷಕ ಶಕ್ತಿ.

ಗಾಯತ್ರೀ ಮಂತ್ರವನ್ನು ನಾಲ್ಕು ವೇದಗಳಲ್ಲೂ ಕಾಣಬಹುದು. ವೇದೋಕ್ತವಾದ ವಿಧಿನಿಷೇಧಗಳನ್ನು ಸಮರ್ಪಕರೀತಿಯಲ್ಲಿ ಅನುಸರಿಸುವವರು ತಾವೂ ಪಾವನರಾಗುತ್ತಾರೆ. ಇವರನ್ನೂ ಪಾವನಮಾಡುತ್ತಾರೆ.

ಪ್ರಜಾಪತಿಯು ಮನುವಿಗೆ ಹೇಳಿದನು : ಏನೆಂದರೆ ಬ್ರಾಹ್ಮಣನಾದವನಿಗೆ ಸದಾಚಾರ, ವೇದಾಧ್ಯಯನ-ಅಧ್ಯಾಪನ, ದಾನ, ಧರ್ಮ, ಶುಚಿ, ಸತ್ಯ, ಸರಳಜೀವನ, ನಿಷ್ಕಾಪಟ, ಭಗವದ್ಭಕ್ತಿ, ಶಮದಮಾದಿಗಳು ವೇದಕ್ಕಿಂತಲೂ (ಅಂದರೆ ಕೇವಲ ವೇದಪಠನಕ್ಕಿಂತಲೂ) ಅಧಿಕ.

ಹೇ ಯುಧಿಷ್ಠಿರ, ಯಾವ ಅಧಿಕಾರಿಯು ಸಂಧ್ಯೋಪಾಸನೆಯನ್ನು ನಿತ್ಯದಲ್ಲಿಯೂ ಶ್ರದ್ಧೆಯಿಂದ ಆಚರಿಸುತ್ತಾನೋ ಅಂಥ ಉಪಾಸಕನು ಬ್ರಹ್ಮಲೋಕವನ್ನು ಹೊಂದುತ್ತಾನೆ. ಈ ಮಾತಿನಲ್ಲಿ ಸಂದೇಹವಿಲ್ಲ.

ನಾಲ್ಕು ವೇದಗಳಲ್ಲಿ ಪಾರಂಗತನಾಗಿ ಗಾಯತ್ರೀ ಉಪಾಸನೆಯನ್ನು ನಿತ್ಯ ಅನುಷ್ಠಾನ ಮಾಡದವನಕ್ಕಿಂತಲೂ ಕೇವಲ ಗಾಯತ್ರೀ ಉಪಾಸನೆಯಲ್ಲಿ ವಿಧಿವತ್ತಾಗಿ ನಿರತನಾದವನು ಉತ್ತಮನೆಂದು ಸ್ವಾಮಿಯ ಅಭಿಪ್ರಾಯ.

ಪೂರ್ವದಲ್ಲಿ ಒಂದು ಸಾರಿ ಚತುರ್ಮುಖ ಬ್ರಹ್ಮದೇವರ ಸಮ್ಮುಖದಲ್ಲಿ ಋಷಿಗಳೂ, ದೇವತೆಗಳೂ, ಗಾಯತ್ರಿಯನ್ನೂ ಮತ್ತು ನಾಲ್ಕು ವೇದಗಳನ್ನೂ ತುಲನಾತ್ಮಕ ದೃಷ್ಟಿಯಿಂದ ಪರೀಕ್ಷಿಸಲಾಯಿತು. ಆಗ ಎಲ್ಲರೂ ಒಮ್ಮನಸ್ಸಿನಿಂದ ಗಾಯತ್ರಿಯು ವೇದಗಳಿಗಿಂತ ಗುರುತರವೆಂದು ಅನುಮೋದಿಸಿದರು.

'ಯಥಾ ವಿಕಸಿತೇಪುಷ್ಪೇ ಮಧುಗೃಹ್ಣಂತಿ ಷಟ್ಪದಾಃ |

ಏವಂ ಗೃಹೀತಾ ಸಾವಿತ್ರೀ ಸರ್ವ ವೇದೇ ಚ ಪಾಂಡವ' ||

ದುಂಬಿಗಳು ಅನೇಕ ಅರಳಿದ ಹೂವುಗಳಿಂದ ಮಕರಂದವನ್ನು ಸಂಗ್ರಹಿಸುವಂತೆ, ಹೇ ಪಾಂಡವಾ, ಸಾವಿತ್ರಿಯು ಸರ್ವವೇದಗಳಿಂದಲೂ ಸಾರಭೂತವಾದ ಮಕರಂದದಂತೆ ಸಂಗ್ರಹೀತವಾಗಿದೆ. ಆದ್ದರಿಂದ ಈ ಗಯತ್ರಿಯು 'ವೇದಮಧು' ಎಂದು ಪ್ರಸಿದ್ಧಿಹೊಂದಿದೆ.

ಆದ್ದರಿಂದ ಗಾಯತ್ರಿಯನ್ನು ವೇದಗಳ ಪ್ರಾಣ ಎಂದು ಜ್ಞಾನಿಗಳು ಹೇಳುತ್ತಾರೆ. ಸಾವಿತ್ರೀ ರಹಿತವಾದ ವೇದಗಳು ನಿರ್ಜೀವವೆಂದು ಅವರ ಅಭಿಪ್ರಾಯ.

'ಸಹಸ್ರ ಪರಮಾಂದೇವೀಂ ಶತಮಾಧ್ಯಾಂ ದಶಾವರಾಮ್ '||

ಹೇ ಕೌಂತೇಯ, ಗಾಯತ್ರೀ ಜಪಾನುಷ್ಠಾನ ವಿಚಾರದಲ್ಲಿ, ಸಹಸ್ರ ಸಂಖ್ಯಾಕ ಜಪವು ಉತ್ತಮ. ನೂರುಸಂಖ್ಯೆಯ ಜಪವು ಮಧ್ಯಮ. ಹತ್ತು ಸಂಖ್ಯೆಯ ಜಪವು ಕನಿಷ್ಟ. ಇದನ್ನು ಮನಸ್ಸಿನಲ್ಲಿರಿಸಿಕೊಂಡು ಗಾಯತ್ರೀ ಜಪಾನುಷ್ಠಾನವನ್ನು ನಿತ್ಯದಲ್ಲಿ ಅನುಷ್ಠಾನಕ್ಕೆ ಅಳವಡಿಸಿಕೊಳ್ಳುವವನಾಗು. ಈ ಪ್ರಕಾರದ ನಿತ್ಯ ಜಪಾನುಷ್ಠಾನವು ಸರ್ವಪಾಪಗಳನ್ನು ನಾಶಮಾಡಿ ಮಾನವನ ಅಭ್ಯುದಯಕ್ಕೆ ಕಾರಣವಾಗುತ್ತದೆ. ಈ

ವಿಚಾರದಲ್ಲಿ ಸಂದೇಹ ಪಡಲಾಗದು. ಹೇಗೆಂದು ಮಹಾಭಾರತದಲ್ಲಿ ಶ್ರೀಕೃಷ್ಣನು ಯುಧಿಷ್ಠಿರನಿಗೆ ಮಾಡಿದ ಉಪದೇಶ.

******